# ಹೊಳೆನರಸೀಪುರದ ಜೆ.ಎಂ.ಎಫ್.ಸಿ., ರವರ ನ್ಯಾಯಾಲಯದಲ್ಲಿ.

## ಸಿ.ಸಿ.ನಂಃ 1216/15

| | | |
|---|---|---|
| ಸಾಕ್ಷಿಯ ಹೆಸರು | ಃ ಸಂತೋಷ | ಸಿ.ಡಬ್ಲ್ಯೂ ಃ 5 |
| ತಂದೆ ಹೆಸರು | ಃ ದ್ಯಾವಪ್ಪ | ಪಿ.ಡಬ್ಲ್ಯೂ ಃ 4 |
| ವಯಸ್ಸು | ಃ 39 ವರ್ಷ | ಪ್ರಮಾಣೀಕರಿಸಿದ ದಿಃ 04/03/2020 |
| ವೃತ್ತಿ | ಃ ರಸಗೊಬ್ಬರ ಮತ್ತು ಸಿಮೆಂಟ್ ಅಂಗಡಿ ವ್ಯಾಪಾರ | |
| ವಾಸ | ಃ ಕಡವಿನ ಹೊಸಹಳ್ಳಿ ಗ್ರಾಮ | |

**ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ ಯವರಿಂದ**

ನಾನು ಈಗ 15 ವರ್ಷಗಳಿಂದ ಹೊ.ನ.ಪುರ ನಗರದಲ್ಲಿ ಹಾಸನ-ಮೈಸೂರು ರಸ್ತೆಯ ಹೇಮಾವತಿ ಸೇತುವೆ ಪಕ್ಕದಲ್ಲಿ ರಸಗೊಬ್ಬರ ಮತ್ತು ಸಿಮೆಂಟ್ ಅಂಗಡಿ ನಡೆಸುತ್ತಿದ್ದೇನೆ. ನನ್ನ ಅಂಗಡಿಯ ಎಡಬದಿಗೆ ಈಗ 8 ವರ್ಷಗಳಿಂದ ಎಂ.ಎಸ್.ಐ ಮದ್ಯ ಮಾರಾಟ ಮಳಿಗೆ ನಡೆಯುತ್ತಿದೆ. ಹೀಗಿರುವಾಗ ದಿಃ 15.11.2014 ರಂದು ನಾನು ಎಂದಿನಂತೆ ರಾತ್ರಿ 8 ಗಂಟೆ ಸಮಯದಲ್ಲಿ ನನ್ನ ಅಂಗಡಿಯ ಬಾಗಿಲು ಹಾಕಿಕೊಂಡು ಹೋಗಿದ್ದೆನು. ನಂತರ ಮರುದಿನ ಭಾನುವಾರ ಆಗಿದ್ದರಿಂದ ನಾನು ಮಧ್ಯಾಹ್ನ 12 ಗಂಟೆ ಸಮಯಕ್ಕೆ ನನ್ನ ಅಂಗಡಿಯ ಹತ್ತಿರ ಹೋಗಿ ನೋಡಲಾಗಿ ಪಕ್ಕದಲ್ಲಿದ್ದ ಎ.ಎಸ್.ಐ.ಎಲ್ ಅಂಗಡಿಯಲ್ಲಿ ರಾತ್ರಿ ಸಮಯದಲ್ಲಿ ಹಿಂದಿನ ಗೋಡೆ ಒಡೆದು ಕಳ್ಳತನ ಮಾಡಿರುವುದಾಗಿ ಅಲ್ಲಿದ್ದ ಚಾ.ಸಾ 1 ರವರು ತಿಳಿಸಿದರು. ಆ ಬಗ್ಗೆ ಚಾ.ಸಾ 1 ರವರು ದೂರು ಸಹ ನೀಡಿರುವುದಾಗಿ ನನಗೆ ತಿಳಿಸಿದರು. ಚಾ.ಸಾ 2 ರಿಂದ 5 ರವರು ಸಹ ಸದರಿ ಮದ್ಯ ಮಾರಾಟ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದರು. ನಾನು ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ 1 ಮತ್ತು 3 ನೇ ಆರೋಪಿತರ ಪರವಾಗಿ ಶ್ರೀ ಬಿ.ಹೆಚ್.ವಿ. ವಕೀಲರಿಂದ**

ನಾನು ಘಟನೆ ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಮರುದಿನ ಘಟನಾ ಸ್ಥಳದಲ್ಲಿ ಜನರು ಮಾತನಾಡಿದ್ದನ್ನು ಕೇಳಿಕೊಂಡು ಆ ಬಗ್ಗೆ ಪೊಲೀಸರಿಗೆ ಹೇಳಿಕೆ ನಿಡಿದ್ದೇನೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಯಾವತ್ತು ಠಾಣೆಗೆ ಹೋಗಿಲ್ಲ ಎಂದರೆ ಸರಿ. ನನ್ನ ಹೇಳಿಕೆ ಪಡೆದುಕೊಂಡ ಪೊಲೀಸರ ಹಸರು ನನಗೆ ಗೊತ್ತಿಲ್ಲ ಎಂದರೆ ಸರಿ.

ಮೇಲಿನ ಪಾಟೀಸವಾಲನ್ನು ಉಳಿದ ಆರೋಪಿತರ ಪರವಾಗಿ ಅಳವಡಿಸಿಕೊಳ್ಳುವಂತೆ ಕೋರಿಕೊಂಡಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ.

ಜೆ.ಎಂ.ಎಫ್.ಸಿ, ಹೊಳೆನರಸೀಪುರ.